ಬೀಳುತ್ತಿರುವ ಮಳೆಯಿಂದಾಗಿ ಅಪ್ಪ ಕೂಗಿದ್ದು ಅವರಿಗೆ ಕೇಳಿಸಲಿಲ್ಲ.

ಅಪ್ಪ ಅವರಿದ್ದಲ್ಲಿಗೆ ಬಂದಾಗ ನೊಗದ ಹಗ್ಗವನ್ನು ಜಗ್ಗಿ ಚಿಂಡನ್ ಕೇಳಿದ, "ಬೀಡಿ ಇದೆಯಾ ನೈನಾರೇ(ನಾಯರ್ ಗಂಡಸರನ್ನು ಕೆಳಜಾತಿಯವರು ಕರೆಯುವ ಪರಿ)... ಚಳಿ ತಡೆಯಕ್ಕಾಗ್ತಿಲ್ಲ".

ತನ್ನನ್ನು ಬೀಡಿ ಕೇಳುವುದು ಅಪ್ಪನಿಗೆ ಹಿಡಿಸದು. ಆದರೂ ಚಿಂಡನ ಚಳಿಯ ನಡುಕ ನಿಲ್ಲುವುದಕ್ಕೆ ಎರಡು ದಮ್ಮು ಅನಿವಾರ್ಯ. ಅಪ್ಪ ಪ್ಲಾಸ್ಟಿಕ್ ಕವರಿನಲ್ಲಿ ಭದ್ರವಾಗಿರಿಸಿದ್ದ ಸಾಧು ಬೀಡಿಯ ಕಟ್ಟಿನಿಂದ ಒಂದನ್ನು ತೆಗೆದು ಚಿಂಡನಿಗೆ ನೀಡಿದರು.

"ಇನ್ನು ಕೇಳಬೇಡ ಚಿಂಡ. ನಾನು ಕೊಡೋಲ್ಲ ಇರೋದೇ ಒಂದು ಕಟ್ಟು" ಅಪ್ಪ ಎಚ್ಚರಿಸಿದರು.

"ನೈನಾರೇ, ನೀವು ಹೀಗೆ ಬೀಡಿ ತಿನ್ನಬೇಡಿ" ಫಕ್ಕೀರ ಉಪದೇಶ ನೀಡಿದ.

"ಲೋ ಫಕ್ಕೀರ, ನಾನು ನಿನಗೆ ಹೇಲ್‌ಬೇಡ ಅಂದ್ರೆ ನಿನಗೆ ಹೇಲದಿರಕ್ಕೆ ಸಾಧ್ಯಾನ ಹೇಳು? ಹೆಚ್ಚಿಗೆ ಮಾತುಬೇಡ. ಗದ್ದೆಗೆ ಕಾಲಿಳಿಸಿ ಕೆಲಸ ಮಾಡು."

ಮಳೆ ನಿಂತಿತು,

ಕೋಣಗಳು ಕೆಮ್ಮಣ್ಣಿನಿಂದ ಕೆಂಪಾದ ಗದ್ದೆಗಿಳಿದವು.

ಹಲಿಕೆಯಲ್ಲಿ ಪಾದಗಳನ್ನೂರಿ ಅಪ್ಪ ಕೋಣಗಳ ಬಾಲಗಳನ್ನು ಹಿಡಿದುಕೊಂಡರು. ಒದ್ದೆಯಾದ ಬಾಲಗಳು ಅಪ್ಪನ ಕೈಯಿಂದ ಜಾರಿದವು. ಅಪ್ಪ ಬೀಡಿಯನ್ನು ಗಟ್ಟಿಯಾಗಿ ಕಚ್ಚಿ 'ಹೋಯ್‌ಯ್ಯ...' ಎಂದು ವಿಶಿಷ್ಟ ರಾಗದಲ್ಲಿ ಕಿರುಚಿದರು. ತಕ್ಷಣ ಮೂರು ಜೋಡಿಗಳು ಒಟ್ಟಿಗೆ ಓಡತೊಡಗಿದವು. ಒಬ್ಬ ವಾಟರ್ ಸ್ಕೇಟರಿನಂತೆ, ಅಪ್ಪ ಕೆಸರು ನೀರಿನಲ್ಲಿ ನೀರಹಕ್ಕಿಯಂತೆ ಹಾರತೊಡಗಿದರು. ಏತನ್ಮಧ್ಯೆ ಬಾಲಗಳನ್ನು ಕೊಂಚ ಸಡಿಲಗೊಳಿಸಿ ಹಲಿಕೆಯ ವೇಗವನ್ನು ನಿಯಂತ್ರಣಕ್ಕೆ ತಂದರು. ಕೆಸರಿನ ನೀರಿನಲ್ಲಿ ಕೋಣಗಳು ಒಂದು ಕಾಮನಬಿಲ್ಲನ್ನು ಬರೆದವು. ಚಿಮ್ಮಿದ ನೀರಿನಲ್ಲಿ ಅವು ಮುಂಗಾಲುಗಳನ್ನೆತ್ತಿ ಗಾಳಿಯಲ್ಲಿ ತೇಲತೊಡಗಿದವು. ಹಲಿಕೆಯ ಕೆಳಗಿನ ಮಣ್ಣಿನ ಹೆಂಟೆಗಳು ಒಡೆದು ನಿಮಿಷಾರ್ಧದಲ್ಲಿ ಗದ್ದೆ ಒಂದು ನೀರಿನ ಹಾಸಿಗೆಯಾಗಿ ಬದಲಾಯಿಸಿತು.

ನರ್ಸ್, ಅಪ್ಪನ ಮೂಗಿಗೆ ಆಮ್ಲಜನಕದ ಮುಖವಾಡವನ್ನು ಸಿಕ್ಕಿಸಿದರು. ಪ್ರೇಮಚಂದ್ರನೊಂದಿಗೆ ನರ್ಸ್‌ಗಳೂ ಆಂಬುಲೆನ್ಸನ್ನು ಹತ್ತಿದರು.

ಗಾಡಿ ಮುಂದಕ್ಕೆ ಸಾಗಿತು.

ಪ್ರೇಮಚಂದ್ರ ಅಪ್ಪನನ್ನು ನೋಡಿದ.

ಅವರು ಏನೂ ತಿಳಿಯದವರಂತೆ ಕಣ್ಮುಚ್ಚಿ ಮಲಗಿದ್ದರು.

ಉಸಿರಾಟಕ್ಕನುಗುಣವಾಗಿ ಅವರ ಎದೆ ಏರುತ್ತಲೂ ಇಳಿಯುತ್ತಲೂ ಇತ್ತು. ಡಾಕ್ಟರ್ ಕೊಟ್ಟ ಬೀಡಿಗಳನ್ನು ಪ್ರೇಮಚಂದ್ರ ಆಗಲೂ ಭದ್ರವಾಗಿರಿಸಿದ್ದ. ಅದನ್ನು ಖಚಿತಪಡಿಸಲು ಅದನ್ನೊಮ್ಮೆ ಮುಟ್ಟಿ ನೋಡಿದ. ಅದನ್ನು ಎಸೆದ ಕೂಡಲೇ ಅಪ್ಪನ ಉಸಿರೇ ನಿಂತು ಹೋಗಬಹುದೆಂದೆನಿಸಿತು. ಅಪ್ಪ ತೀರಿಕೊಳ್ಳಬಹುದೇ ಎಂಬ ವಿಚಿತ್ರ ಭಯ ಅವನನ್ನು ಕಾಡಲಾರಂಭಿಸಿತು.

ಒದ್ದೆಯಾದ ಬೀಡಿಗಳನ್ನು ಅವನು ಮತ್ತೊಮ್ಮೆ ಒತ್ತಿ ಹಿಡಿದ. ಆಗ ಬೀಡಿಯಿಂದ ಒಂದು ಹೃದಯ ನಿಧಾನವಾಗಿ ಜಾಗೃತಗೊಂಡು ಸ್ಪಂದಿಸುತ್ತಿರುವುದನ್ನು ಅವನು ಕೇಳಿಸಿಕೊಂಡ.

ಅಷ್ಟರಲ್ಲಿ ಮೊಬೈಲ್ ಸದ್ದು ಮಾಡಿತು.

ಪ್ರೇಮಚಂದ್ರ ಅದನ್ನು ಕೈಗೆತ್ತಿಕೊಂಡ. ಎರ್ನಾಕುಳಂನಿಂದ ಹೆಂಡತಿ ಫೋನಾಯಿಸಿದ್ದಳು.

"ಹಲೋ ಪ್ರೇಂ, ವೇರ್ ಆರ್ ಯು? ಬೆಳಗ್ಗೇನೇ ಬಂದು ಬಿಡ್ತೀನಿಂತ ಹೇಳಿ..." ಹೆಂಡತಿಯ ಧ್ವನಿಯಲ್ಲಿ ಕೋಪ ಬೆರೆತಿತ್ತು.

ಅಪ್ಪನನ್ನು ಕಣಕಲು ಬರುವುದು ವರ್ಷಕ್ಕೊಮ್ಮೆ. ಅದೂ ಅವಳಿಗೆ ಇಷ್ಟವಿಲ್ಲ.